

ಚಿಕುನ್‌ಗುನ್ಯಾ ವಾಸಿಯಾಗಿದ್ದರೂ, ಬೆಳಗ್ಗಿನ ಚಳಿಗೆ ಕೈಕಾಲ ಬೆರಳುಗಳು ಮುರುಟಿ ಹೋಗಿ, ಬಿಡಿಸಲು ಅಸಾಧ್ಯವಾಗಿ ಬಿಡುತ್ತಿತ್ತು. ಹೆಜ್ಜೆಯೂರುವಾಗ ಅಸಾಧ್ಯ ನೋವು. ಅಲೋಪತಿ, ಹೋಮಿಯೋಪತಿಯಾಗಿ ಇದೀಗ ಟೀಚರು ನಾಟಿ ವೈದ್ಯಕ್ಕೆ ಶರಣು ಬಂದಿದ್ದರು. ವೈದ್ಯರು ಕೊಟ್ಟ ಸಿಕ್ಕ ಸಿಕ್ಕ ಬೇರು, ನಾರು, ತೊಗಟೆ ಮತ್ತು ಎಲೆಗಳನ್ನು ಜಜ್ಜಿ ಕಹಿ ಕಹಿ ಕಷಾಯ ಕುಡಿದರೂ ಚಿಕುನ್‌ಗುನ್ಯಾ ಸಂಪೂರ್ಣ ವಾಸಿಯಾಗಿರಲಿಲ್ಲ. 'ಅದರ ಗುಣವೇ ಹಾಗೆ. ಸಾಡೇ ಸಾತಿ ಶನಿಯ ಹಾಗೆ. ಜಪ್ಪೆಂದರೂ ಬಿಟ್ಟು ಹೋಗುವುದಿಲ್ಲ' ಎಂದು ಮನೆ ಮನೆ ಸಂದರ್ಶಿಸುವ ನರ್ಸಮ್ಮ ಹೇಳಿದ್ದಳು. ಅದು ಟೀಚರಿಗೆ ನೆನಪಾಯಿತು. ಹಾಳಾದ್ದು. ಔಷಧಿಯೇ ಇಲ್ಲದ ಕಾಯಿಲೆ ಯಾಕಾಗಿ ಬರುತ್ತದೋ? ಅವನಿಗೆ ನನ್ನ ಜೀವ ಬೇಕಿದ್ರೆ ಒಮ್ಮೆಲೇ ತೆಗೆದುಕೊಳ್ಳಲಿ. ಹೀಗೆ ಹಂತ ಹಂತವಾಗಿ ನರಕ ಶಿಕ್ಷೆ ಅನುಭವಿಸುವ ಹಾಗೆ ಮಾಡುವುದೇಕೆ? ಎಂದು ಟೀಚರು ಪ್ರತಿದಿನ ಗೊಣಗುತ್ತಿದ್ದರು.

ಟೀಚರು ತಮ್ಮನ್ನು ನೋಡಿಕೊಳ್ಳುವುದರೊಂದಿಗೆ ರಾಯರನ್ನು ನೋಡಿಕೊಳ್ಳಬೇಕಾಗಿತ್ತು. ಎರಡು ವರ್ಷ ರಾಯರು ಮೆಂಟಲ್ ಡಿಪ್ರೆಶನ್ನಿನಿಂದ ಸಾವಿನ ಕದ ತಟ್ಟಿ ಬಂದಿದ್ದರು. ಅವರ ನೆನಪು ಶಕ್ತಿ ತುಂಬಾ ಕಡಿಮೆಯಾಗಿತ್ತು. ಯಾವಾಗ ಎಷ್ಟು ಮಾತ್ರೆ ತೆಗೆದುಕೊಳ್ಳಬೇಕು ಎಂದು ಡಾಕ್ಟರರು ಸ್ಪಷ್ಟವಾಗಿ ಹೇಳಿದ್ದರೂ ರಾಯರು ಅದನ್ನು ಮರೆತೇ ಬಿಟ್ಟಿದ್ದರು. ಟೀಚರು ತಾವಾಗಿಯೇ ಡಾಕ್ಟರರ ಹತ್ತಿರ ಹೋಗಿ ರಾಯರ ಪ್ರಿಸ್ಕ್ರಿಪ್ಶನ್ನು ಕೇಳಿಕೊಂಡು ಬಂದು ಚೀಟಿಯಲ್ಲಿ ಗುರುತು ಹಾಕಿಕೊಂಡು ಮಾತ್ರೆಗಳನ್ನು ಕೊಡುತ್ತಿದ್ದರು. ಬೆಳಿಗ್ಗೆ ಥೈರಾಯ್ಡಿಗೆ ಒಂದು, ಶುಗರ್‌ಗೆ ಒಂದು. ರಾತ್ರಿ ಬೀಪಿಗೊಂದು, ಕೊಲೆಸ್ಟ್ರಾಲಿಗೊಂದು, ಮೆಂಟಲ್ ಡಿಪ್ರೆಶನ್ನಿಗೆ ಐದು. ತನ್ನ ಪತಿ ದಿನಕ್ಕೆ ಒಂಬತ್ತು ಮಾತ್ರೆ ನುಂಗುತ್ತಿದ್ದರೂ ಯಾವಾಗ ಏನಾಗುತ್ತದೋ ಎಂಬ ಆತಂಕ ಟೀಚರನ್ನು ಕಾಡುತ್ತಲೇ ಇರುತ್ತಿತ್ತು. ಪತಿಯನ್ನು ಎಲ್ಲಿಗೂ ಒಬ್ಬಂಟಿಯಾಗಿ ಕಳುಹಿಸುತ್ತಿರಲಿಲ್ಲ. ಸೂಜಿಯೊಂದಿಗೆ ದಾರ ಎಂದು ತನ್ನನ್ನು ಎಲ್ಲರೂ ಆಡಿಕೊಳ್ಳುತ್ತಿರುವುದು ಅವರಿಗೆ ಗೊತ್ತಿರಲಿಲ್ಲವೆಂದಲ್ಲ. ಆಡುವವರು ಆಡಿಕೊಳ್ಳಲಿ. ಇವರಿಗೆ ಏನಾದರೂ ಆದರೆ ಅನುಭವಿಸಬೇಕಾದವಳು ನಾನು ತಾನೇ ಎಂದು ಅವರು ಸಮಾಧಾನಪಟ್ಟುಕೊಳ್ಳುತ್ತಿದ್ದರು.

ಟೀಚರು ಅಂದು ಸ್ವಲ್ಪ ಬಿಗಿಯಾಗಿದ್ದರು. 'ಕೇಳಿದ್ರಾ, ಇವಳು ಅವನ್ನೇ ಮದ್ವೆಯಾಗೋದಂತೆ'. ರಾಯರಿಗೆ ಅದು ಗೊತ್ತಿರಲಿಲ್ಲವೆಂದಲ್ಲ. ಹೇಳದಿದ್ದರೆ ತನ್ನ ತಲೆ ಸಿಡಿದೇಹೋಗುತ್ತದೆ ಎಂದಾದಾಗ ಅವರು ಆ ಮಾತನ್ನು ಎತ್ತುತ್ತಿದ್ದರು. ರಾಯರಿಗೆ ಅದು ಹಿತದ ಸುದ್ದಿಯಾಗಿರಲಿಲ್ಲ. ಹಾಗಂತ ಅದನ್ನು ಧಿಕ್ಕರಿಸಲೂ ಆಗುತ್ತಿರಲಿಲ್ಲ. ಇರುವವಳು ಒಬ್ಬಳು ಮಗಳು. ಇವಳ ಹೊಟ್ಟೆಯಲ್ಲಿ ಹುಟ್ಟಿದವ ತನ್ನ ಚಿತೆಗೆ ಅಗ್ನಿ ಸ್ಪರ್ಶ ಮಾಡಬೇಕು. ಅದಕ್ಕೂ ಮೊದಲೇ ಜೀವ ಹೋದರೆ ಇವಳು ಕಟ್ಟಿಕೊಂಡವನೇ ಗತಿ. ಇವಳು ಮದುವೆಯಾಗ ಹೊರಟಿದ್ದಾಳೆ. ಮದುವೆ ಎಂದರೆ ಅದೇನು ಹುಡುಗಾಟವಾ? ಬೇಕೆಂದಾಗ ಒಂದಾಗುವ, ಬೇಡವೆಂದಾಗ ಬಿಟ್ಟು ಬಿಡಲು ಸಾಧ್ಯವಾಗುವ ವಿಧಿಯಾ? ಒಮ್ಮೆ ಕಟ್ಟಿಕೊಂಡರೆ ಕೊನೆತನಕ.

ಟೀಚರು ಹೇಳಿದ್ದರು: 'ನೀನು ಅವನನ್ನು ಆಗುವುದು ಇವರಿಗೆ ಇಷ್ಟವೇ ಇಲ್ಲ. ಮದುವೆಯಾಗುವಾಗ ತುಂಬಾ ಯೋಚಿಸಬೇಕು. ಜೀವನದಲ್ಲಿ ಮದುವೆ ಎನ್ನುವುದು ಒಂದು ಸಲ ಮಾತ್ರ ನಡೆಯುವ ವಿಧಿ. ದುಡುಕಿ ಪಶ್ಚಾತ್ತಾಪ ಪಡಬೇಡ'. ಇವಳು ಅಮ್ಮನನ್ನೇ ಕಾಡಿದ್ದಳು. 'ನೀನು ಹೇಗಾದರೂ ಮಾಡಿ ಅಪ್ಪನ್ನ ಒಪ್ಪಿಸಮ್ಮ. ನಾನು ಮೆಚ್ಚಿಕೊಂಡವನನ್ನು ಬಿಟ್ಟು ಬೇರೆಯವನನ್ನು ಆಗಲು ನನ್ನಿಂದ ಸಾಧ್ಯವಿಲ್ಲ'. ಮೆಚ್ಚಿಕೊಳ್ಳುವುದು ಏನನ್ನು? ಗಂಡಿಗೆ ಪರ್ಮನೆಂಟು ಕೆಲಸವಿಲ್ಲ. ದುಡಿಮೆಯಿಂದ ಹೊರ ಹಾಕಿದರೆ ಕೃಷಿ ಮಾಡಲು ಜಾಗವಿಲ್ಲ. ಹೋಗಲಿ ಅಂದರೆ ಇದ್ದೊಂದು ಮನೆಯನ್ನು ತಂಗಿ ಮದುವೆಗಾಗಿ